ನಗುತ್ತಾರೆ. ಪ್ರತಿಭಾವಂತರು ಸಾಕಷ್ಟು ಇದ್ದೂ ಅವರನ್ನು ಪ್ರೋತ್ಸಾಹಿಸಿ, ಚಿತ್ರರಂಗದ ಮಟ್ಟವನ್ನು ಎತ್ತರಿಸುವ ಸಾಮೂಹಿಕ ಪ್ರಯತ್ನ ನಡೆಯುತ್ತಿಲ್ಲ ಎಂಬ ಖೇದ ಅವರ ಮಾತಿನಲ್ಲಿ ಸ್ಪಷ್ಟವಾಗಿಯೇ ವ್ಯಕ್ತವಾಯಿತು.

'ಹಾಗೆ ನೋಡಿದರೆ ನಾವು ಕಮರ್ಷಿಯಲ್ ಎಂದು ಹೇಳಿಕೊಂಡು ಮಾಡುತ್ತಿರುವ ಸಿನಿಮಾಗಳ ಮೂಲಕ ಜನರಿಗೆ ಮೋಸ ಮಾಡುತ್ತಿದ್ದೇವೆ. ಹಾಗೆಯೇ ಪ್ಯಾರಲಲ್ ಸಿನಿಮಾಗಳು ಎಂದು ಹೇಳಿಕೊಂಡು ಬರುತ್ತಿರುವ ಸಿನಿಮಾಗಳೂ ಅದೇ ಕೆಲಸ ಮಾಡುತ್ತಿವೆ. ಪ್ರತಿವರ್ಷ ಚಲನಚಿತ್ರ ಪ್ರಶಸ್ತಿಗಳು ಘೋಷಣೆಯಾದಾಗಲೂ ಅದರ ಕುರಿತು ಅಸಮಾಧಾನ ವ್ಯಕ್ತವಾಗುತ್ತಿರುತ್ತದೆ. ಆದರೆ ಯಾಕೆ ಹಾಗಾಯಿತು ಎಂದು ಯಾರೂ ಗಟ್ಟಿಯಾಗಿ ಪ್ರಶ್ನಿಸುವುದಿಲ್ಲ. ಪ್ರಶಸ್ತಿ ಪಡೆದವರಂತೂ ಅದರ ಬಗ್ಗೆ ಮಾತಾಡುವುದೇ ಇಲ್ಲ. ಚಲನಚಿತ್ರೋತ್ಸವಗಳದ್ದಂತೂ ಬೇರೆಯದೇ ಕಥೆ. ಈ ಎಲ್ಲ ಕಾರಣಗಳಿಂದ ಜನರಿಗೆ ಸಿನಿಮಾಗಳ ಮೇಲೆ ನಂಬಿಕೆ ಹೊರಟುಹೋಗಿದೆ. ಪಕ್ಕದ ಮಲಯಾಳಂ, ತಮಿಳು ಚಿತ್ರರಂಗದಲ್ಲಿ ಒಂದು ಒಳ್ಳೆಯ ಸಿನಿಮಾ ಬಂತೆಂದರೆ ಎಲ್ಲರೂ ಒಟ್ಟಾಗಿ ಅದನ್ನು ಎತ್ತಿಹಿಡಿಯುತ್ತಾರೆ. ಪ್ಯಾರಲಲ್ ಸಿನಿಮಾಗಳಿಗೂ ಅಲ್ಲಿ ಮಾರುಕಟ್ಟೆಯನ್ನು ರೂಪಿಸಿಕೊಂಡಿದ್ದಾರೆ. ಆದರೆ ನಮ್ಮಲ್ಲಿ ಎರಡು ಮೂರು ವರ್ಷಕ್ಕೊಂದು ವರ್ಲ್ಡ್‌ಕ್ಲಾಸ್ ಸಿನಿಮಾಗಳೂ ಬರುತ್ತಿಲ್ಲ. 2019ರಲ್ಲಿ 'ಬಳೆಕೆಂಪ' ನಂತರ, ಪ್ರತಿಷ್ಠಿತ ಅಂತರರಾಷ್ಟ್ರೀಯ ಸಿನಿಮೋತ್ಸವಗಳಲ್ಲಿ ಕನ್ನಡದ ಇನ್ನೊಂದು ಸಿನಿಮಾ ಸುದ್ದಿಮಾಡಲಿಲ್ಲ. ಯಾಕೆ ಹೀಗಾಗುತ್ತಿದೆ? ಇಲ್ಲಿ ಸಾಕಷ್ಟು ಪ್ರತಿಭಾವಂತರಿದ್ದಾರೆ. ಆದರೆ ವ್ಯವಸ್ಥೆ ಸರಿ ಇಲ್ಲ. ಅದು ಸರಿಹೋಗದೆ ಬದಲಾವಣೆ ಸಾಧ್ಯವಿಲ್ಲ' ಎನ್ನುತ್ತಾರೆ ಅವರು.

'ಮುಂದಿನ ಸಿನಿಮಾ ತಯಾರಿ ನಡೆದಿದೆಯೇ?' ಎಂದು ಕೇಳಿದರೆ ಮತ್ತದೇ ವ್ಯವಸ್ಥೆಯ ಕಡೆಗೆ ಕೈತೋರಿ ನಗುತ್ತಾರೆ ಪೃಥ್ವಿ. 'ಕಥೆಗಳೇನೋ ಬೇಕಾದಷ್ಟಿವೆ. ಆದರೆ ಅಗತ್ಯ ಬೆಂಬಲ ಬೇಕಲ್ಲವೇ?' ಎಂದು ನಿರ್ಮಾಪಕರ ಹುಡುಕಾಟದಲ್ಲಿರುವ ಸೂಚನೆ ನೀಡುತ್ತಾರೆ ಅವರು. ಕನ್ನಡದ ಕೆಲವು ಸೂಪರ್‌ಸ್ಟಾರ್‌ಗಳ ಸಂಭಾವನೆಯ ಹತ್ತರಲ್ಲಿ ಒಂದಂಶದಲ್ಲಿ ಪೃಥ್ವಿಯವರಂಥ ನಿರ್ದೇಶಕರು ಒಳ್ಳೆಯ ಸಿನಿಮಾ ರೂಪಿಸಬಲ್ಲರು. ನಿಜವಾಗಲೂ ಕನ್ನಡದ ಹಿರಿಮೆಯನ್ನು ಹೆಚ್ಚಿಸುವ ಅವರಂಥವರ ಕಡೆಗೆ ಗಾಂಧಿನಗರದ ದೊಡ್ಡಜೇಬಿನ ನಿರ್ಮಾಪಕರು ತುಸು ದೃಷ್ಟಿಹಾಯಿಸಬೇಕಷ್ಟೆ. ■



# ಮಹಿಷಾಸುರನ ಅಬ್ಬರ

ಹುಟ್ಟುತ್ತಾ ಯಾರೂ ಕೆಟ್ಟವರಲ್ಲ; ಬೆಳೆಯುತ್ತ ಸುತ್ತಲಿನ ಪರಿಸರ – ಪರಿಸ್ಥಿತಿಗಳು ಮನುಷ್ಯನನ್ನು ಕೆಟ್ಟವನನ್ನಾಗಿ ಮಾಡುತ್ತವೆ. ಈ ಎಳೆಯನ್ನು ಇಟ್ಟುಕೊಂಡು ಕನ್ನಡದಲ್ಲಿ ಬಂದ ಸಿನಿಮಾಗಳಿಗೆ ಲೆಕ್ಕವಿಲ್ಲ. ಅದೇ ಪಟ್ಟಿಗೆ ಹೊಸ ಸೇರ್ಪಡೆ 'ಮಹಿಷಾಸುರ'. ಇದೇ ಎಳೆಗೆ ವೋಟ್ ಬ್ಯಾಂಕ್ ರಾಜಕೀಯ ಮತ್ತು ತ್ರಿಕೋನ ಪ್ರೇಮಕಥೆಗಳನ್ನು ಕಸಿ ಮಾಡಿ ತುಸು ಭಿನ್ನವಾಗಿ ಸಿನಿಮಾ ಕಟ್ಟಲು ಪ್ರಯತ್ನಿಸಿದ್ದಾರಂತೆ ನಿರ್ದೇಶಕ ಉದಯ ಪ್ರಸನ್ನ. ಹಲವು ಸಿನಿಮಾಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದ ಅವರಿಗಿದು ಮೊದಲ ಸಿನಿಮಾ. ಇತ್ತೀಚೆಗಷ್ಟೇ ಟ್ರೈಲರ್ ರಿಲೀಸ್ ಮಾಡಿರುವ ಈ ಚಿತ್ರ ಜನವರಿ ತಿಂಗಳ ಪ್ರಥಮಾರ್ಧದಲ್ಲಿಯೇ ತೆರೆಗೆ ಬರುವ ನಿರೀಕ್ಷೆ ಇದೆ.

'ಮೇಲುಕೋಟೆ ಟೂರಿಂಗ್ ಟಾಕೀಸ್' ಈ ಚಿತ್ರವನ್ನು ನಿರ್ಮಿಸಿದೆ. ರಾಜ್ ಮಂಜು, ಸುದರ್ಶನ್ ಮತ್ತು ಬಿಂದುಶ್ರೀ ಈ ಚಿತ್ರದ ತ್ರಿಕೋನ ಪ್ರೇಮಕಥೆಯ ಮೂರು ಅಂಚುಗಳಾಗಿ ಮಿಂಚುವ ಹಂಬಲದಲ್ಲಿದ್ದಾರೆ.

ಹಳ್ಳಿಯೊಂದರ ಹಿನ್ನೆಲೆಯಲ್ಲಿ ನಡೆಯುವ ಕಥೆ ಇದಾಗಿದ್ದು, ಹುಡುಗಿಗೋಸ್ಕರ ಆಪ್ತ ಸ್ನೇಹಿತರಿಬ್ಬರು ಕಡುವೈರಿಗಳಾಗಿ ಬದಲಾಗುತ್ತಾರೆ. ಕೊನೆಗೆ ಆ ಹುಡುಗಿ ಯಾರಿಗೆ ಸಿಗುತ್ತಾಳೆ ಎನ್ನುವುದೇ ಸಸ್ಪೆನ್ಸ್. ಮೇಲುಕೋಟೆ, ಮಂಡ್ಯ, ಮೈಸೂರು, ರಾಮನಗರ ಸುತ್ತಮುತ್ತ 60 ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ಮಾಡಲಾಗಿದೆ. ಚಿತ್ರದಲ್ಲಿ ಒಟ್ಟು ಮೂರು ಹಾಡುಗಳಿವೆ. ಸುನಿಲ್ ಕೌಶಿ ಸಂಗೀತ ನಿರ್ದೇಶನ ಮಾಡಿದ್ದಾರೆ. ಕೃಷ್ಣ ಚಿತ್ರಕ್ಕೆ ಛಾಯಾಗ್ರಹಣ ಮಾಡಿದ್ದಾರೆ. ■

# ಮತ್ತೆ ಜೊತೆಯಾದ ಸೂರಿ – ಮಾಸ್ತಿ

'ಟಗರು' ಸಿನಿಮಾ ನಿರೂಪಣೆಯ ಕಾರಣಕ್ಕೆ ಎಷ್ಟು ಭಿನ್ನ ಅನಿಸಿತ್ತೋ ಸಂಭಾಷಣೆಯೂ ಅಷ್ಟೇ ಗಮನಸೆಳೆದಿತ್ತು. ಸಂಭಾಷಣೆಕಾರನಾಗಿ ಮಾಸ್ತಿ ಅವರನ್ನು ಪ್ರಖರ ಬೆಳಕಿಗೆ ಒಡ್ಡಿದ ಸಿನಿಮಾ ಅದು. ಸೂರಿ ಮತ್ತು ಮಾಸ್ತಿ ಅವರ ಕಾಂಬಿನೇಷನ್ ಅದಕ್ಕೂ ಹಿಂದೆ 'ಕಡ್ಡಿಪುಡಿ' ಸಿನಿಮಾದಲ್ಲಿಯೂ ಚೆನ್ನಾಗಿ ವರ್ಕೌಟ್ ಆಗಿತ್ತು. 'ಟಗರು' ನಂತರ ಮಾಸ್ತಿ ಅವರಿಗೆ ಸಂಭಾಷಣೆಕಾರನಾಗಿ ಸಾಕಷ್ಟು ಅವಕಾಶಗಳು ಬರತೊಡಗಿದವು. ಹಾಗೆಯೇ ಸೂರಿ ಕೂಡ 'ಪಾಪ್‌ಕಾರ್ನ್ ಮಂಕಿ ಟೈಗರ್' ಸಿನಿಮಾ ಮಾಡಿದರು. ಆದರೆ ಅಲ್ಲಿ ಮಾಸ್ತಿ ಇರಲಿಲ್ಲ. ಈಗ ಮಾಸ್ತಿ ಮತ್ತೆ ಸೂರಿ ಸೂರಿನಡಿ ಸೇರಿಕೊಂಡಿದ್ದಾರೆ. ಅಭಿಷೇಕ್ ಅಂಬರೀಷ್ ನಾಯಕನಾಗಿ ನಟಿಸುತ್ತಿರುವ 'ಬ್ಯಾಡ್ ಮ್ಯಾನರ್ಸ್' ಎಂಬ ಪಕ್ಕಾ ಮಾಸ್ ಸಿನಿಮಾಗೆ ಮಾಸ್ತಿ ಅವರ ಜಕಾಸ್ ಸಂಭಾಷಣೆ ಇರಲಿದೆ.

' ಸೂರಿ ತುಂಬ ಚೆನ್ನಾಗಿ ಕಥೆ ಹೆಣೆದಿದ್ದಾರೆ. ಅವರ ಜೊತೆಯಲ್ಲಿ ನಾನು ಹತ್ತು ಹನ್ನೆರಡು ವರ್ಷ ಕೆಲಸ ಮಾಡಿರುವುದರಿಂದ ಈ ಸಿನಿಮಾಗೆ ಕೆಲಸ ಮಾಡುವುದು ಸಲೀಸು ಅನಿಸುತ್ತಿದೆ. ಮನರಂಜನೆಗೆ ಒತ್ತುಕೊಡುವ ಸಿನಿಇಮಾ ಆದ್ದರಿಂದ ಸಂಭಾಷಣೆಕಾರನಾಗಿ ನನಗೂ ಬರೆಯಲಿಕ್ಕೆ ಸಾಕಷ್ಟು ಅವಕಾಶಗಳಿರುತ್ತವೆ. ಇದು ಸೂರಿ ಅವರ ಜತೆಗೆ ನನ್ನ ಮೂರನೇ ಸಿನಿಮಾ' ಎಂದು ಖುಷಿಯಿಂದಲೇ ಹೇಳಿಕೊಳ್ಳುತ್ತಾರೆ ಮಾಸ್ತಿ.

ಈಗಾಗಲೇ ಚಿತ್ರತಂಡ ಚಿತ್ರೀಕರಣಕ್ಕಾಗಿ ಹಳೆ ಕರ್ನಾಟಕದಲ್ಲಿ ಜಾಗದ ಶೋಧನೆ ನಡೆಸುತ್ತಿದ್ದು, ಜನವರಿ ಕೊನೆಯ ಅಥವಾ ಫೆಬ್ರುವರಿ ಮೊದಲ ವಾರದಲ್ಲಿ ಚಿತ್ರೀಕರಣ ಆರಂಭವಾಗುವ ನಿರೀಕ್ಷೆ ಇದೆ. ಇತರ ಪಾತ್ರಕ್ಕಾಗಿ ಒಂದಿಷ್ಟು ಹೊಸ ಪ್ರತಿಭೆಗಳನ್ನು ಸೂರಿ ಹುಡುಕುತ್ತಿದ್ದಾರೆ. ಅಭಿಷೇಕ್ ಅಂಬರೀಷ್ ಕೂಡ ಈ ಚಿತ್ರದ ಪಾತ್ರಕ್ಕಾಗಿ ಜಿಮ್‌ನಲ್ಲಿ ಸಾಕಷ್ಟು ಬೆವರಿಳಿಸುತ್ತಿದ್ದಾರಂತೆ. ■

